# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **53**

ಸದಸ್ಯರ ಹೆಸರು : **ಶ್ರೀ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕ : **13/02/2024**

ಉತ್ತರಿಸುವ ಸಚಿವರು : **ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು**

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ನಗರಸಭೆಗಳು ಕಾರ್ಯನಿರ್ವಹಿಸುತ್ತಿವೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ನಗರಸಭೆಗಳು: 61<br>ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ. |
| ಆ | ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ನಗರಸಭೆಯ 2023–24ನೇ ಸಾಲಿನ 15ನೇ ಹಣಕಾಸು ಯೋಜನೆಯಲ್ಲಿ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡುವಲ್ಲಿ ಅಧಿಕಾರಿಗಳು ಅಕ್ರಮವೆಸಗಿರುವುದು ಹಾಗೂ ದೈನಂದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ವಿವರ ನೀಡುವುದು; | **ಪೌರಾಡಳಿತ ನಿರ್ದೇಶನಾಲಯದ 15ನೇ ಹಣಕಾಸು ಆಯೋಗದಡಿ ಅರಸೀಕೆರೆ ನಗರಸಭೆಗೆ ಬಿಡುಗಡೆಯಾಗುವ ಅನುದಾನದ ವಿವರ:**<br>ಅರಸೀಕೆರೆ ನಗರಸಭೆಗೆ 2023–24ನೇ ಸಾಲಿನಲ್ಲಿ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಅನುದಾನ ಒಟ್ಟು ರೂ.337.00 ಲಕ್ಷ. ನಗರಸಭೆಯಿಂದ ನಗರಸಭಾ ವ್ಯಾಪ್ತಿಯಲ್ಲಿ ಈ ಅನುದಾನದಡಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುದಾನ ಬಳಕೆಯ ಮಾರ್ಗಸೂಚಿಯಂತೆ ತಯಾರಿಸಿ, ಕೌನ್ಸಿಲ್ ಅನುಮೋದನೆ ಹಾಗೂ ಹಾಸನ ಜಿಲ್ಲಾಧಿಕಾರಿಯವರಿಂದ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಅನುಮೋದಿತ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಬೇಕಾಗುತ್ತದೆ.<br>ಅರಸೀಕೆರೆ ನಗರಸಭೆಗೆ 2023–24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ರೂ.337.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಅಕ್ರಮ ಎಸಗಿರುವ ಬಗ್ಗೆ ದಿನಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿರುತ್ತದೆ. ಆದರೆ 15ನೇ ಹಣಕಾಸು ನಿಧಿಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಅನುದಾನ ಕಾಯ್ದಿರಿಸಿ ಕ್ರಿಯಾ ಯೋಜನೆ ಕಾಯ್ದಿರಿಸಿದ್ದು, ಇದರಲ್ಲಿ ಯಾವುದೇ ಅಕ್ರಮ ಎಸಗಿರುವುದಿಲ್ಲ. |

| | | |
|---|---|---|
| ಇ | ಸರ್ಕಾರದಿಂದ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನದಲ್ಲಿ ನಗರಸಭೆಯ ಎಲ್ಲಾ ವಾರ್ಡಗಳಿಗೆ ಸಮಾನವಾಗಿ ಹಂಚಿಕೆ ಮಾಡಲು ಇರುವ ನಿಬಂಧನೆಗಳೇನು; ರಾಜ್ಯದ ಈ ಒಂದು ನಗರಸಭೆಯಲ್ಲಿ ಅನುದಾನವನ್ನು ಹಂಚಿಕೆ ಮಾಡಲು ತಾರತಮ್ಯವೆಸಗಿರುವುದು ಸಮಂಜಸವಾಗಿದೆಯೇ (ವಿವರ ನೀಡುವುದು) | **15ನೇ ಹಣಕಾಸು ಆಯೋಗದ ಅನುದಾನ:** 2023-24ನೇ ಸಾಲಿನಲ್ಲಿ ಅರಸೀಕೆರೆ ನಗರಸಭೆಗೆ ಹಂಚಿಕೆಯಾದ ಅನುದಾನದಲ್ಲಿ 60% ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ಸದರಿ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಕಡ್ಡಾಯವಾಗಿ ಬಳಸಬೇಕಿರುತ್ತದೆ ಮತ್ತು ಉಳಿದ 40% ರಷ್ಟು ಅನುದಾನವು ಮುಕ್ತ ಅನುದಾನವಾಗಿದ್ದು, ಸದರಿ ಅನುದಾನವನ್ನು 12ನೇ ಷೆಡ್ಯೂಲ್‌ನಲ್ಲಿ ತಿಳಿಸಿರುವ 18 ಕಾರ್ಯಗಳಿಗೆ ನಗರಸಭೆಯ ಆದ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಬಳಸಲು ಮಾರ್ಗಸೂಚಿ ಹೊರಡಿಸಲಾಗಿರುತ್ತದೆ.<br><br>ಅರಸೀಕೆರೆ ನಗರಸಭೆಗೆ ಹಂಚಿಕೆಯಾದ ಅನುದಾನವನ್ನು ಎಲ್ಲಾ ವಾರ್ಡುಗಳಿಗೆ ಸಮಾನವಾಗಿ ಹಂಚಿಕೆ ಮಾಡುವ ತೀರ್ಮಾನವು ನಗರಸಭೆಯ ಕೌನ್ಸಿಲ್ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ನಗರದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾರ್ಡ್ ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸುವ ಕಾಮಗಾರಿಗಳನ್ನು ನಗರಸಭೆಗೆ ಆಯಾ ವರ್ಷ ಲಭ್ಯವಾಗುವ ಅನುದಾನದಲ್ಲಿ ಕೈಗೊಳ್ಳಬೇಕಿರುತ್ತದೆ. ಎಲ್ಲಾ ವಾರ್ಡುಗಳಲ್ಲಿ ಏಕಕಾಲಕ್ಕೆ ಲಭ್ಯವಿರುವ ಅನುದಾನದಿಂದ ಮೂಲಭೂತ ಸೌಕರ್ಯಗಳ ಕೊರತೆಯನ್ನು ನೀಗಿಸಲು ಸಾಧ್ಯವಾಗುವುದಿಲ್ಲ. ನಗರಸಭೆಯ ಕೌನ್ಸಿಲ್ ಗೆ ಕಾಮಗಾರಿಗಳ ಆಯ್ಕೆಯನ್ನು ಮಾಡುವ ಅಧಿಕಾರ ಲಭ್ಯವಿದ್ದು, ಅದರಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ, majority ಸದಸ್ಯರ ಅನುಮೋದನೆ ಪಡೆದು, ಠರಾವಿನೊಂದಿಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅನುಮೋದನೆ ಪಡೆಯಲಾಗಿರುತ್ತದೆ.<br><br>1. ಅರಸೀಕೆರೆ ನಗರಸಭೆಗೆ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ರೂ.337.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/177/ಎಸ್.ಎಫ್.ಸಿ./2020 ದಿನಾಂಕ:10/11/2021 ರನ್ವಯ ಮುಕ್ತ ಅನುದಾನ 40% ಮತ್ತು ನಿರ್ಬಂಧಿತ ಅನುದಾನ 60% ರಂತೆ ಅನುದಾನ ಕಾಯ್ದಿರಿಸಿ, ಸದರಿ ಅನುದಾನದಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ, ಕುಡಿಯುವ |

| | | |
|---|---|---|
| | | ನೀರು ಸರಬರಾಜಿಗಾಗಿ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮಾರ್ಗಸೂಚಿ ನೀಡಲಾಗಿರುತ್ತದೆ.<br><br>ಸರ್ಕಾರದಿಂದ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನದಲ್ಲಿ ನಗರಸಭೆಯ ಎಲ್ಲಾ ವಾರ್ಡುಗಳಿಗೆ ಸಮನಾಗಿ ಹಂಚಿಕೆ ಮಾಡಲು ಯಾವುದೇ ನಿಬಂಧನೆಗಳು ಇರುವುದಿಲ್ಲವಾದ್ದರಿಂದ 15ನೇ ಹಣಕಾಸು ನಿಧಿಯ ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯವೆಸಗಿರುವುದಿಲ್ಲ.<br><br>**ಸ್ವಚ್ಛ ಭಾರತ ಮಿಷನ್ (ನಗರ)–2.0**<br>ಸ್ವಚ್ಛ ಭಾರತ ಮಿಷನ್ (ನಗರ)–2.0 ಯೋಜನೆಯಡಿ ಹಾಸನ ಜಿಲ್ಲೆಯ ಅರಸೀಕೆರೆ ನಗರಸಭೆಯ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನದಲ್ಲಿ ನಗರಸಭೆಯ ಎಲ್ಲಾ ವಾರ್ಡ್ ಗಳಿಗೆ ಸಮಾನವಾಗಿ ಹಂಚಿಕೆ ಮಾಡಲು ಯಾವುದೇ ನಿಬಂಧನೆಗಳಿರುವುದಿಲ್ಲ. |

**ಸಂಖ್ಯೆ:ನಅಇ 05 ಎಲ್‌ಸಿಕ್ಯೂ 2024.**

(ರಹೀಂ ಖಾನ್)
**ಪೌರಾಡಳಿತ ಹಾಗೂ ಹಜ್ ಸಚಿವರು**

# ಅನುಬಂಧ –1

| ಕ್ರ. ಸಂ | ಜಿಲ್ಲೆಯ ಹೆಸರು | ನಗರಸಭೆ |
|---|---|---|
| 1 | ಬೆಂಗಳೂರು ನಗರ | ಹೆಬ್ಬಗೋಡಿ<br>ಮಾದನಾಯಕನಹಳ್ಳಿ |
| 2 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ<br>ಹೊಸಕೋಟೆ<br>ನೆಲಮಂಗಲ |
| 3 | ರಾಮನಗರ | ರಾಮನಗರ<br>ಚನ್ನಪಟ್ಟಣ<br>ಕನಕಪುರ |
| 4 | ತುಮಕೂರು | ತಿಪಟೂರು<br>ಶಿರಾ |
| 5 | ಕೋಲಾರ | ಕೋಲಾರ<br>ಕೆಜಿಎಫ್<br>ಮುಳಬಾಗಿಲು |
| 6 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ<br>ಚಿಂತಾಮಣಿ<br>ಶಿಡ್ಲಘಟ್ಟ<br>ಗೌರಿಬಿದನೂರು |
| 7 | ಚಿತ್ರದುರ್ಗ | ಚಿತ್ರದುರ್ಗ<br>ಚಳ್ಳಕೆರೆ<br>ಹಿರಿಯೂರು |
| 8 | ದಾವಣಗೆರೆ | ಹರಿಹರ |
| 9 | ಶಿವಮೊಗ್ಗ | ಭದ್ರಾವತಿ<br>ಸಾಗರ |
| 10 | ಮೈಸೂರು | ಹುಣಸೂರು<br>ನಂಜನಗೂಡು<br>ಹೂಟಗಳ್ಳಿ |
| 11 | ಚಾಮರಾಜನಗರ | ಚಾಮರಾಜ ನಗರ<br>ಕೊಳ್ಳೇಗಾಲ |
| 12 | ಮಂಡ್ಯ | ಮಂಡ್ಯ |
| 13 | ಹಾಸನ | ಹಾಸನ<br>ಅರಸೀಕೆರೆ |
| 14 | ಕೊಡಗು | ಮಡಿಕೇರಿ |
| 15 | ಚಿಕ್ಕಮಗಳೂರು | ಚಿಕ್ಕಮಗಳೂರು |
| 16 | ದಕ್ಷಿಣ ಕನ್ನಡ | ಉಳ್ಳಾಲ<br>ಪುತ್ತೂರು |
| 17 | ಉಡುಪಿ | ಉಡುಪಿ |

| | | |
|---|---|---|
| 18 | ಬೆಳಗಾವಿ | ನಿಪ್ಪಾಣಿ<br>ಗೋಕಾಕ |
| 19 | ಉತ್ತರಕನ್ನಡ | ಕಾರವಾರ<br>ಶಿರಸಿ<br>ದಾಂಡೇಲಿ |
| 20 | ವಿಜಯಾಪುರ | |
| 21 | ಬಾಗಲಕೋಟೆ | ಬಾಗಲಕೋಟ<br>ರಬಕವಿ-ಬನಹಟ್ಟಿ<br>ಜಮಖಂಡಿ<br>ಇಲಕಲ್ಲ<br>ಮುಧೋಳ |
| 22 | ಧಾರವಾಡ | |
| 23 | ಗದಗ | ಗದಗ ಬೆಟಗೇರಿ |
| 24 | ಹಾವೇರಿ | ಹಾವೇರಿ<br>ರಾಣೇಬೆನ್ನೂರ |
| 25 | ಕಲಬುರಗಿ | ಶಹಾಬಾದ |
| 26 | ಯಾದಗಿರಿ | ಯಾದಗಿರಿ<br>ಶಹಪುರ<br>ಸುರಪುರ |
| 27 | ರಾಯಚೂರು | ರಾಯಚೂರು<br>ಸಿಂಧನೂರು |
| 28 | ಕೊಪ್ಪಳ | ಕೊಪ್ಪಳ<br>ಗಂಗಾವತಿ |
| 29 | ಬೀದರ್ | ಬೀದರ<br>ಬಸವಕಲ್ಯಾಣ |
| 30 | ಬಳ್ಳಾರಿ | ಸಿರುಗುಪ್ಪ |
| 31 | ವಿಜಯನಗರ | ಹೊಸಪೇಟೆ |

ಜಂಟಿ ನಿರ್ದೇಶಕರು (ಆಡಳಿತ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು